ಪ್ರವೇಶಿಸುವ ಶಕ್ತಿ ಇರುತ್ತದೆ. ಆ ಶಕ್ತಿಯಿಂದ ಅವನು ಕನಸುಗಳನ್ನು ಕದಿಯುತ್ತಾನೆ, ಕಲ್ಪನೆಗಳನ್ನೂ ಕದಿಯುತ್ತಾನೆ. ನಿಜ ಜಗತ್ತಿನಲ್ಲಿ ಕನಸುಗಳು ಕದಿಯುವಂತಹದ್ದಾಗಿದ್ದರೆ ಕನಸಿಗೂ ಪೇಟೆಂಟ್ ಮಾಡಬೇಕಾಗಿ ಬರುತಿತ್ತು. ಹೀಗೆ ಕನಸಿನ ಬಗ್ಗೆ ಸಿನಿಮಾ ಮಾಡಿದ ಕ್ರಿಸ್ಟೋಫರ್ ನೋಲನ್ ಒಬ್ಬ ಕನಸುಗಾರನೇ ಸರಿ!

ಕೆಲವರಿಗೆ ಕನಸಗಳು ಪುನರಾವರ್ತನೆ ಆಗುತ್ತವಂತೆ. ಅಂದರೆ ಪದೇ ಪದೇ ಅದೇ ಕನಸು. ಯಾರೋ ನಮ್ಮ ಮೇಲೆ ದಾಳಿ ಮಾಡಿದಂತೆ, ದೊಡ್ಡ ಕಂದಕದಲ್ಲಿ ಬೀಳುತ್ತಿರುವಂತೆ. ನನ್ನ ತಾಯಿಗೆ ಆಗಾಗ ಮನೆಗೆ ಕಳ್ಳರು ಬರುವಂತೆ, ಅವಳೊಬ್ಬಳೆ ಆ ಕಳ್ಳರನ್ನು ಎದುರಿಸಿ ನಿಲ್ಲುವಂತೆ ಕನಸು. ಅಮ್ಮ ಈ ಕನಸು ಕಂಡಾಗಲೆಲ್ಲ ರಾತ್ರಿ ಕನವರಿಸುವುದು ಸಾಮಾನ್ಯವಾಗಿ, ''ಏ! ಕಳ್ಳ ಕಳ್ಳ, ಬಂದೆ ನಿಮಗೆ...'' ಎಂದು. ತನ್ನ ಕನಸಿನಲ್ಲಿ ಅಮ್ಮ ಒನಕೆ ಓಬವ್ವನೇ ಆಗಿರಬಹುದೇನೊ!

ನನಗೆ ಮತ್ತೆ ಮತ್ತೆ ಬೀಳುವ ಒಂದು ಕನಸಿನ ಕುರಿತು ಹೇಳಬೇಕು. ಪರೀಕ್ಷಾ ಕೊಠಡಿಗೆ ಹೋಗಿ ಕೂತ ನನಗೆ ಪ್ರಶ್ನೆ ಪತ್ರಿಕೆ ಕೈಗೆತ್ತಿಕೊಂಡ ಮೇಲೆ ತಿಳಿಯುತ್ತದೆ ಇವತ್ತು ಬೇರೆ ವಿಷಯದ ಪರೀಕ್ಷೆ ಎಂದು. ಪ್ರಶ್ನೆ ಪತ್ರಿಕೆ ನಾನು ಓದಿದ ವಿಷಯದ್ದಲ್ಲ! ಬೆವರಲು ಶುರು ಮಾಡುತ್ತೇನೆ. ಎಲ್ಲರೂ ತಲೆ ತಗ್ಗಿಸಿ ಬರೆಯುತ್ತಿರುತ್ತಾರೆ. ಆದರೆ, ನಾನು ಏನೂ ಬರೆಯಲು ಬರದೇ ತಬ್ಬಿಬ್ಬಾಗಿರುತ್ತೇನೆ. ಜೋರಾಗಿ ಅಳಲು ಶುರು ಮಾಡುತ್ತೇನೆ. ಈ ಕನಸು ಕಂಡು ಬೆಳಗ್ಗೆ ಎದ್ದಾಗಲೆಲ್ಲ ತಲೆ ದಿಮ್ ಎನ್ನುವುದು. ಈ ಕನಸಿಗೆ ಅರ್ಥ ಹಚ್ಚುವುದಾದರೆ ಶಾಲೆಯಲ್ಲಿ ಓದುವಾಗಿನ ಪರೀಕ್ಷೆ ಬಗೆಗಿನ ಒತ್ತಡಗಳು, ಅಂಕ ಇಷ್ಟು ಬರಬೇಕು ಎಂಬ ನಿರೀಕ್ಷೆಗಳು ಇವೆಲ್ಲಾ ಮನಸಿನಲ್ಲಿ ಇನ್ನೂ ಎಲ್ಲೋ ಹಾಗೆಯೇ ಉಳಿದಿವೆ ಅನಿಸುವುದು. ಎಷ್ಟೋ ಬಾರಿ ನಮಗೆ ಬೇಕಾದವರು ಕನಸಿನಲ್ಲಿ ಸಾಯುತ್ತಾರೆ, ಸತ್ತಿರುವವರು ಬದುಕಿರುತ್ತಾರೆ. ಕೆಟ್ಟ ಕನಸುಗಳು ಬಿದ್ದಾಗ ಅದಕ್ಕೆ ಅರ್ಥ ಹಚ್ಚಲು ಶುರು ಮಾಡುತ್ತೇವೆ. ಅದಕ್ಕೆ ಅರ್ಥ ಹಚ್ಚಲು ಜ್ಯೋತಿಷಿಗಳ ಮೊರೆ ಹೋಗುತ್ತೇವೆ. ನನಗಂತೂ ಈಗೀಗ ಬಿದ್ದ ಕನಸನ್ನೆಲ್ಲಾ ಗೂಗಲ್ ಮಹಾಶಯನಿಗೆ ಕೇಳಿ ಅದರ ಅರ್ಥ ತಿಳಿಯುವ ಕುತೂಹಲ. ನಮ್ಮ ಉಪನಿಷತ್ತುಗಳಲ್ಲಿ ಕನಸುಗಳ ಬಗ್ಗೆ ಎರಡು ದೃಷ್ಟಿಕೋನವಿದೆ. ಒಂದು ಬಗೆಯ ಕನಸುಗಳು ನಮ್ಮ ಒಳಗಿನ ಆಸೆಗಳನ್ನು ತೋರಿಸುವಂತಹವು. ಇನ್ನೊಂದು ಬಗೆಯ ಕನಸುಗಳಲ್ಲಿ ಮನುಷ್ಯನ ಆತ್ಮ ಶರೀರವನ್ನು ಬಿಟ್ಟು ತೇಲಾಡುವುದಂತೆ. ಎಚ್ಚರವಾಗುವಾಗ ಶರೀರ ಆತ್ಮ ಮತ್ತೆ ಒಂದಾಗುವವು. ರಾವಣ ಯುದ್ಧದಲ್ಲಿ ಸೋತಂತೆ ತ್ರಿಜಟೆ ಕನಸು ಕಾಣುವಳೆಂದು ರಾಮಾಯಣದಲ್ಲಿದೆ. ಬಹುಶಃ ಇದು ಉಪನಿಷತ್ತು ಹೇಳುವ ಎರಡನೇ ಮಾದರಿಯ ಕನಸಾಗಿರಬೇಕು.

ಹಾಗೆ ನೋಡಿದರೆ ರಾಮಾಯಣವು ವಾಲ್ಮೀಕಿ ಕಂಡ ಕನಸು. ಪುರುಷೋತ್ತಮನ ರೂಪ ರೇಖೆಗಳನ್ನು ಕೆತ್ತಿ ನಿಲ್ಲಿಸುವ ಕನಸು. ಮಹಾಭಾರತ ಅಂತಹ ಇನ್ನೊಂದು ಕನಸು. ನಮ್ಮ ಜನಾಂಗ ನಮ್ಮ ಸಂಸ್ಕೃತಿ ಕಂಡ ಮಹಾಸ್ವಪ್ನಗಳು ಈ ಎರಡೂ ಮಹಾಕಾವ್ಯಗಳಲ್ಲಿದೆ. ಮಹಾಭಾರತದ ಒಳ ಹೊಕ್ಕು ನೋಡಿದಾಗ ಎಷ್ಟು ಬಗೆಯ ಕನಸುಗಳು ಕಾಣ ಸಿಗುತ್ತವೆ! ಧೃತರಾಷ್ಟ್ರನಿಗೆ ಅವನ ಮಕ್ಕಳ ಬಗೆಗಿನ ಕನಸು, ಭೀಷ್ಮನಿಗೆ ತಾನು ಮಾತು ಕೊಟ್ಟಂತೆ ಕುರು ಸಿಂಹಾಸನದ ಸ್ಥಿರತೆ ಬಗ್ಗೆ ಕನಸು, ಕರ್ಣನ ಕನಸು, ಕುಂತಿ ತನ್ನ ಮಕ್ಕಳ ಬಗ್ಗೆ ಕಂಡ ಕನಸು. ದ್ರೋಣಾಚಾರ್ಯರ ಕನಸು, ಅಶ್ವತ್ಥಾಮನ ಕನಸು, ದುರ್ಯೋಧನನ ಕನಸು ಇಲ್ಲಿ ಎಷ್ಟೊಂದು ಕನಸುಗಳ ತಾಕಲಾಟಗಳಿವೆ! ಇವನ್ನೆಲ್ಲಾ ನೋಡಿದಾಗ ಮನುಷ್ಯನ ಜೀವನವು ಅವನ ಕನಸು ಮತ್ತು ಕಂಡ ಕನಸನ್ನು ಸಾಕ್ಷಾತ್ಕರಿಸುವುದರ ನಡುವಣ ಒಂದು ನಿರಂತರ ಹೋರಾಟ ಎನಿಸುತ್ತದೆ.

ತಮ್ಮ ಮಕ್ಕಳು ಮುಂದೆ ಡಾಕ್ಟರ್ ಆಗಬೇಕು, ಎಂಜಿನಿಯರ್ ಆಗಬೇಕು ಎಂದು ತಂದೆ ತಾಯಿ ಕನಸು ಕಾಣುವುದು ತಪ್ಪಲ್ಲ. ಮಕ್ಕಳನ್ನು ವೈದ್ಯರು, ವಿಜ್ಞಾನಿಗಳು ಮತ್ತು ಎಂಜಿನಿಯರುಗಳನ್ನಾಗಿ